ಹೇಳಿದ್ದಾರೆ. ನಾನು ಒಂದು ಸಾರಿ ಖಿದ್ದಾಗಿ ಮಾತನಾಡುತ್ತೇನೆ. ಅವರು ಮಾಡದೇ ಇದ್ದಂಥ ಸಂದರ್ಭದಲ್ಲಿ ತಮ್ಮ ಸಲಹೆಯನ್ನು ಗಮನಕ್ಕೆ ತೆಗೆದುಕೊಂಡು ನನ್ನ ಕಾರ್ಯ ವ್ಯಾಪ್ತಿಯಲ್ಲಿ ಏನಾದರೂ ನೀರಿನ ವ್ಯವಸ್ಥೆಯನ್ನು ಒದಗಿಸಲು ಪರಿಶೀಲನೆ ಮಾಡಿಕ್ರಮ ಕೈಗೊಳ್ಳುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಈ 2 ತಿಂಗಳ ಅವಧಿಯನ್ನು ಬಿಟ್ಟರೆ, ಸಕಲೇಶಪುರ ಆಸ್ಪತ್ರೆಗೆ 6 ತಿಂಗಳ ಕಾಲ ನೀರಿನ ಅವಶ್ಯಕತೆಯಿಲ್ಲ. ಮಳೆ ನೀರೇ ಬರುತ್ತದೆ. ನೀವು ಏನಾದರೂ ಮಾಡುವುದಿದ್ದರೆ ಈ ತಿಂಗಳಲ್ಲೇ ಮಾಡಬೇಕು. ಹಾಗೆ ಮಾಡಿದರೆ ಅಲ್ಲಿನ ರೋಗಿಗಳಿಗೆ ಸ್ವಲ್ಪ ಉಪಕಾರವಾಗುತ್ತದೆ. ಇಲ್ಲದಿದ್ದರೆ, ಇನ್ನು 6 ತಿಂಗಳು ಅಂದರೆ ಸೆಪ್ಟೆಂಬರ್‌ವರೆಗೆ ಅದರ ಅವಶ್ಯಕತೆಯಿಲ್ಲ. ಆದ್ದರಿಂದ, ತಕ್ಷಣಕ್ಕೆ ತಾವು ಏನಾದರೂ ಮಾಡಲಿಕ್ಕೆ ಸಾಧ್ಯವಿದೆಯೇ?

ಡಾ|| ಹೆಚ್.ಸಿ. ಮಹದೇವಪ್ಪ : ತಮ್ಮ ಸಲಹೆಯನ್ನು ವಿಚಾರ ಮಾಡುತ್ತೇನೆ.

ಅರಕಲಗೂಡು ತಾಲ್ಲೂಕು ಪಂಚಾಯಿತಿಯ ಕಾರ್ಯಕ್ರಮಗಳಲ್ಲಿ ಹಣ ದುರುಪಯೋಗ

145 - ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಕಲಗೂಡು ತಾಲ್ಲೂಕು ಪಂಚಾಯಿತಿ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಜನತಾಮನೆ, ಶೌಚಾಲಯ, ನೆರಳು ಭಾಗ್ಯ, ಶಾಲಾ ಕೊಠಡಿಗಳ ನಿರ್ಮಾಣ ಕಾರ್ಯಗಳಲ್ಲಿ ಹಣ ದುರಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಹಣ ದುರುಪಯೋಗದ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳು ಏನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಹೌದು.

ಆ) ಈ ಯೋಜನೆಗಳಡಿ ಪ್ರಯೋಜನ ಪಡೆದ ಫಲಾನುಭವಿಗಳಿಗೆ ಹಣದ ವಿತರಣೆ ಸರಿಯಾಗಿ ಮತ್ತು ಸರಿಯಾದ ಸಮಯದಲ್ಲಿ ಆಗದೇ ಇರುವ ಕುರಿತು ಬಂದ ದೂರಿನ ಮೇರೆಗೆ ಕಾಮಗಾರಿಗಳ ವಿಶೇಷ ಲೆಕ್ಕ ತನಿಖೆ ಕೈಗೊಂಡಾಗ ಆರೋಪವು ಮೇಲು ನೋಟಕ್ಕೆ ಸಾಬೀತಾಗಿರುವ ಕಾರಣ ವಿಚಾರಣೆ ಕಾದಿರಿಸಿ ಸಂಬಂಧಿಸಿದ ಕಿರಿಯ ಅಭಿಯಂತರರನ್ನು ಅಮಾನತ್ತಿನಲ್ಲಿಡಲಾಗಿದೆ. ಎಲ್ಲಾ ಕಾಮಗಾರಿಗಳ ಸ್ಥಳ ತನಿಖೆ ಪೂರ್ಣಗೊಳ್ಳುವ ಹಂತದಲ್ಲಿದ್ದು, ತಪ್ಪಿತಸ್ಥರ ವಿರುದ್ಧ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎ.ಟಿ. ರಾಮಸ್ವಾಮಿ : ನಮ್ಮ ಅರಕಲಗೂಡು ತಾಲ್ಲೂಕು ಪಂಚಾಯಿತಿ ವತಿಯಿಂದ ಜನತಾ ಮನೆ, ಶೌಚಾಲಯ, ನೆರಳು ಭಾಗ್ಯ ಮತ್ತು ಶಾಲಾ ಕೊಠಡಿಗಳ ನಿರ್ಮಾಣದ ಕಾರ್ಯಕ್ರಮಗಳನ್ನು ಏನು ಅನುಷ್ಠಾನ ಮಾಡುತ್ತಿದ್ದಾರೆ, ಅದರಲ್ಲಿ ಹಣ ದುರುಪಯೋಗವಾಗಿದೆ. ಅದರ ಬಗ್ಗೆ ಕ್ರಮ

ತೆಗೆದುಕೊಳ್ಳುತ್ತೇನೆಂಬ ಮಾತನ್ನು ಮಾನ್ಯ ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ. ಇವೆಲ್ಲ ಬಡವರ ಪರ ಕಾರ್ಯಕ್ರಮಗಳು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು. ಸರ್ಕಾರಕ್ಕೆ ನಾನೇ ಪತ್ರ ಬರೆದು ಖುದ್ದಾಗಿ ಮಂತ್ರಿಗಳನ್ನು ಭೇಟಿ ಮಾಡಿ ಹಣ ದುರುಪಯೋಗವಾಗುತ್ತಿದೆ, ಕ್ರಮ ತೆಗೆದುಕೊಳ್ಳಿ ಎಂದು ಹೇಳಿ ವಿನಂತಿ ಮಾಡಿಕೊಂಡು ಸುಮಾರು 4 ತಿಂಗಳಾಯಿತು. ಇವರು ಕ್ರಮ ತೆಗೆದುಕೊಳ್ಳುವುದು ನಿಧಾನವಾಗುತ್ತಿರುವುದರಿಂದ ಅಲ್ಲೇ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತವೋ, ಆಗುವುದಿಲ್ಲವೋ? ಬಡವರ ಕಾರ್ಯಕ್ರಮಗಳು ಸ್ಥಗಿತಗೊಳ್ಳುತ್ತವೋ, ಗೊಳ್ಳುವುದಿಲ್ಲವೋ? ಈ ಉದಾಹರಣೆಗೆ ಜನತಾ ಮನೆಗಳು. ಅದರ ಕೆಲಸವೇ ಆಗಿಲ್ಲ. ಆದರೆ ಹಣ ಡ್ರಾ ಮಾಡಿಕೊಂಡಿದ್ದಾರೆ. ಈಗ ಜನತಾ ಮನೆಗಳ ಕೆಲಸ ಹೇಗೆ ಆಗುತ್ತದೆ. ಶಾಲಾ ಕೊಠಡಿಗಳು ನಿರ್ಮಾಣ ಏನಾಗಬೇಕು ಇದೆಲ್ಲಾ ಸ್ಥಗಿತಗೊಂಡಿವೆ. ನಿಮಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಎಷ್ಟು ತಿಂಗಳು ಬೇಕು? ಏಕೆ ನಿಧಾನ ಮಾಡುತ್ತಿದ್ದೀರಿ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಅವರು ನನಗೆ ಪತ್ರ ಬರೆದಾದಮೇಲೆ, ಈ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಆದ ಮೇಲೆ ದಿನಾಂಕ 27.11.96ನೇ ದಿವಸ ಕಿರಿಯ ಅಭಿಯಂತರನ್ನು ನಾವು ಅಮಾನತ್ತಿನಲ್ಲಿಟ್ಟಿದ್ದೇವೆ. ಅದಾರದ ಕೂಡಲೇ ತತ್‌ಕ್ಷಣದಲ್ಲಿ ವಿಶೇಷ ವಾದಂತಹ ಲೆಕ್ಕತನಿಖೆಯನ್ನು ಮಾಡಬೇಕೆಂದು ಹೇಳಿ ಲೆಕ್ಕ ತನಿಖೆ ಸಂಪೂರ್ಣವಾಗಿ ಪ್ರಗತಿಯಲ್ಲಿ. ಸ್ಥಳ ಪರೀಕ್ಷೆ ಮಾಡಿ, ಮಾಡಿರತಕ್ಕಂಥ ಕಳಪೆ ಕಾಮಾಗಾರಿಗಳು ದುರುಪಯೋಗವಾದಂತಹ ಪ್ರಕರಣಗಳನ್ನು ವಿಚಾರಣೆ ಮಾಡಬೇಕು ಎನ್ನುವ ನೀತಿಗೆ ಅನುಗುಣವಾಗಿ ಅವರು ಮಾಡಿರತಕ್ಕಂಥ ಕ್ರಮದ ಪ್ರಕಾರ ಇದು 1992-93ನೇ ಇಸವಿಯಲ್ಲಿ ನಡೆದಿದೆ. ತಾವು ಹಿಂದಿನ ಬಾರಿ ಶಾಸಕರಾಗಿದ್ದಾಗಲ್ಲೂ ಕೂಡ ಈ ಕಾರ್ಯಕ್ರಮದಲ್ಲಿ ಹಣದ ದುರುಪಯೋಗ ಇದೇ ಅಧಿಕಾರಿ ಮೂಲಕವಾಗಿದೆ. ತಾವು ಇದನ್ನು ಗಮನಕ್ಕೆ ತಂದ ತಕ್ಷಣ ದಿನಾಂಕ 19.11.1996ನೇ ತಾರೀಖಿನಂದು ಕಿರಿಯ ಅಭಿಯಂತರರನ್ನು ಅಮಾನತ್ತಿನಲ್ಲಿಡಲಾಗಿದೆ. ಸ್ಪೆಷಲ್‌ಆಡಿಟ್ ಕೂಡ ಮಾಡಲಾಗಿದೆ. ಏಪ್ರಿಲ್ ತಿಂಗಳ 30ನೇ ತಾರೀಖಿನೊಳಗಾಗಿ ವರದಿಯನ್ನು ಸಂಪೂರ್ಣವಾಗಿ ಕೊಡಬೇಕೆಂದು ಕೂಡ ನಾವು ತರಿಸಿಕೊಂಡಿದ್ದೇವೆ. ಖಂಡಿತವಾಗಿ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದು ಬಡವರ ಕಾರ್ಯಕ್ರಮದಲ್ಲಿ ದುರುಪಯೋಗವಾಗಬೇಕು ಎಂದು ಅಲ್ಲ. ಸರ್ಕಾರದ ಯಾವ ಕಾರ್ಯಕ್ರಮವಾದರೂ ಕೂಡ ದುರುಪಯೋಗ ಆಗತಕ್ಕಂಥಾದ್ದು, ದುರುಪಯೋಗವೇ. ಅವರ ಮೇಲೆ ಕ್ರಮ ತೆಗದುಕೊಳ್ಳಲೇಬೇಕು.

ಶ್ರೀ ಎ.ಟಿ. ರಾಮಸ್ವಾಮಿ : ಈಗ ನೀವು ಕಿರಿಯ ಅಭಿಯಂತರರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ ಎಂದು ಹೇಳಿದಿರಿ. ಅವರನ್ನು ಅಮಾನತ್ತಿನಲ್ಲಿಟ್ಟ ತಕ್ಷಣ ಅದು ಸಾಧನೆಯಾಗಲಿಲ್ಲ. ಈ ಎಲ್ಲಾ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ. ಜನತಾ ಮನೆ ಪ್ರಾರಂಭವಾಗಿಲ್ಲ. ಹಣ ಡ್ರಾ ಮಾಡಿದ್ದಾರೆ.

ಅಧ್ಯಕ್ಷರು : ತಮ್ಮ ಸಲಹೆ ಏನು?

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನೇ ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ನಾಲ್ಕು ತಿಂಗಳಾಯಿತು. ಇದನ್ನು ಇನ್ನು ನಾಲ್ಕು ತಿಂಗಳಿನಿಂದ ತನಿಖೆ ಮಾಡುತ್ತಿದ್ದಾರೆಂದು,

ತನಿಖೆಯನ್ನು ಆದಷ್ಟು ಬೇಗ ಪೂರ್ಣ ಮಾಡಿ ಕ್ರಮ ಕೈಗೊಳ್ಳದಿದ್ದರೆ ಕೆಲಸ ಹೇಗೆ ಪ್ರಗತಿಯಾಗುತ್ತದೆ? ಜನತಾ ಮನೆ ಹೇಗೆ ನಿರ್ಮಾಣವಾಗುತ್ತದೆ? ಶಾಲಾ ಕೊಠಡಿಗಳು ಹೇಗೆ ನಿರ್ಮಾಣವಾಗುತ್ತದೆ? ಜನತಾ ಕಾರ್ಯಕ್ರಮಗಳು ಹೇಗೆ ಆಗುತ್ತದೆ? ಮಾನ್ಯ ಸಚಿವರು ಒಂದು ಮಾತು ಹೇಳಿದರು, ಈ ರೀತಿ ಹಿಂದೆ ಕೂಡ ಆಗಿತ್ತು ಎಂದು. ಹಿಂದೆ ಆಗಿದ್ದರೆ ನೀವು ಕ್ರಮ ತೆಗೆದುಕೊಳ್ಳಬೇಡಿ ಎನ್ನುವ ಮಾತನ್ನು ಹೇಳುತ್ತಿಲ್ಲ. ಹಿಂದೆ ಆಗಿರಬಹುದು, ಇವತ್ತು ಆಗಿರಬಹುದು. ನೀವು ಅದಕ್ಕೆ ಕ್ರಮವನ್ನು ತೆಗೆದುಕೊಳ್ಳಲೇಬೇಕಲ್ಲಾ. ಹಾಸನ ಜಿಲ್ಲೆಯಲ್ಲಿ ಹಣ ದುರುಪಯೋಗವಾಗುತ್ತಿದೆಯೆಂದರೆ ಅದರ ಬಗ್ಗೆ ಕ್ರಮ ತೆಗೆದಕೊಳ್ಳುವುದಕ್ಕೆ ಏಕೆ ಅಂಜಿಕೆ ಎಂದು ಗೊತ್ತಾಗುತ್ತಿಲ್ಲ. ಹಾಸನ ಜಿಲ್ಲೆಗೆ ನೀವು ವಿಶೇಷವಾದಂತಹ ಗಮನವನ್ನು ಕೊಡಬೇಕು. ಸ್ವಲ್ಪ ತುರ್ತಾಗಿ ಕ್ರಮ ತೆಗದುಕೊಳ್ಳಬೇಕು. ಅಲ್ಲಿ ಹಣ ದುರುಪಯೋಗವಾಗುತ್ತಿದೆ ಎಂದರೆ ನೀವು ಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೆ ಮುಂದೆ ನೋಡುತ್ತಿದ್ದೀರಿ. ಸರ್ಕಾರದ ಗಮನಕ್ಕೆ ತರುವುದೇನೆಂದರೆ ಇದರಲ್ಲಿ ಕೆಲವು ಜಿಲ್ಲಾ ಪಂಚಾಯತ್ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಸದಸ್ಯರುಗಳೂ ಕೂಡ ಈ ಹಣ ದುರುಪಯೋಗದಲ್ಲಿ ಶಾಮೀಲಾಗಿದ್ದಾರೆ ಎನ್ನುವಂತಹ ಆರೋಪ ನನಗೆ ಬಂದಿದೆ. ಈ ವಿಷಯ ನನ್ನ ಗಮನಕ್ಕೆ ಬಂದಿದೆ. ಇದರಲ್ಲಿ ಬೇರೆಯವರು ಹಸ್ತಕ್ಷೇಪ ಮಾಡಿ ನಿಮ್ಮ ತನಿಖೆಗೆ ಅಡ್ಡಿ ಮಾಡುತ್ತಿದ್ದಾರೆ ಎನ್ನುವಂತಹ ಮಾತೂ ಕೂಡ ನಮ್ಮ ಗಮನಕ್ಕೆ ಬಂದಿದೆ.

ಅಧ್ಯಕ್ಷರು : ಅವರು ಅಂಜುವುದಿಲ್ಲ. ಅವರು ಅಂಜುವ ಪೈಕಿ ಅಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಈಗ ಮಾರ್ಚ್ ತಿಂಗಳು ಕೊನೆಯಾಗುತ್ತಾ ಬಂದಿದೆ. ಈಗ ಕೆಲಸ ಹೇಗೆ ಪ್ರಗತಿಯಾಗುತ್ತದೆ? ಹೇಳಿ. 4-5-6 ತಿಂಗಳು ನೀವು ತನಿಖೆ ಮಾಡುವುದಕ್ಕೆ ತೆಗೆದುಕೊಂಡರೆ ಜನತಾ ಮನೆ ಗುರಿಯನ್ನು ಹೇಗೆ ಇಟ್ಟುಕೊಂಡಿದ್ದೀರಿ ಅದನ್ನು ಹೇಗೆ ಪೂರ್ಣ ಮಾಡುತ್ತೀರಿ? ಶಾಲಾ ಕೊಠಡಿಗಳನ್ನು ಹೇಗೆ ಪೂರ್ಣ ಮಾಡುತ್ತೀರಿ? ಶೌಚಾಲಯಗಳು, ನಿರ್ಮಾಣ 5 ಪರ್ಸೆಂಟ್ ಕೂಡ ಆಗಿಲ್ಲ. ಅಲ್ಲಿ ನೋಡಿದರೆ ಹಣವೆಲ್ಲಾ ಖರ್ಚಾಗಿ ಹೋಗಿದೆ. ಇದರ ಬಗ್ಗೆ ತುರ್ತಾಗಿ ಕ್ರಮ ತೆಗೆದುಕೊಳ್ಳುಬೇಕೆಂದು ನನ್ನ ಒತ್ತಾಯ ಅಷ್ಟೇ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯದ ಕಳಕಳಿ ಬಗ್ಗೆ ಸಂಪೂರ್ಣವಾದಂತಹ ವಿಶ್ವಾಸ ಇದೆ. ನಿಜವಾಗಿ ಅವರು ನಮ್ಮನ್ನು ಅಭಿನಂದಿಸುತ್ತಾರೆ ಎಂದು ಅಂದುಕೊಂಡೆ. ಉದಾಹರಣೆಗೆ 1992-93ನೇ ಸಾಲಿನಲ್ಲಿ 1993-94ನೇ, ಹಾಗೂ 1994-95ನೇ ಸಾಲಿನಲ್ಲಿ ನನ್ನ ವರದಿಯ ಪ್ರಕಾರ ಈ ಯೋಜನೆಯಲ್ಲಿ ನಿಗದಿತ ಘಟಕದ ವೆಚ್ಚದ ಪ್ರಕಾರ ಅನುದಾನ ಬಿಡುಗಡೆ ಮಾಡಲಾಗಿದೆ. ಲಭ್ಯತೆಯ ಅನುದಾನ ಉಪಯೋಗಿಸಿಕೊಂಡು ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರೈಸಿಲ್ಲ. ಅಪೂರ್ಣ ಕಾಮಗಾರಿ ಈಗಲೂ ಮುಂದುವರಿಯುತ್ತಿವೆ. ಶಾಲಾ ಕಟ್ಟಡಗಳು ಕಳಪೆ, ಖರ್ಚನ್ನು ಮಾಡಿದಷ್ಟು ಕಾಮಗಾರಿ ಪ್ರಗತಿ ಆಗಿಲ್ಲ. ಇದು 1992-93, 1993-94 ಹಾಗೂ 1994-95ರಲ್ಲಿ ಆಗಿರತಕ್ಕಂಥಾದ್ದು. ಇಲ್ಲಿ ವಿಳಂಬವಾಗಿ ರತಕ್ಕಂಥಾದರ ಬಗ್ಗೆ ಜನ ಪ್ರತಿನಿಧಿಗಳು ಆದಂತಹವರು ಆಯಾಯ ಸಂದರ್ಭದಲ್ಲಿ ಮಾಡಬೇಕಾಗಿರತಕ್ಕಂಥ ಕಾರ್ಯಗಳು ಸರಿಯಾಗಿ ನಿರ್ವಹಿಸದೆ ಇರತಕ್ಕಂಥ

ಕಾರಣ ಕೂಡ ಇದೆ. ಇದಕ್ಕೆ ಯಾರೂ ಅಂಜಬೇಕಾದ ಅಗತ್ಯವಿಲ್ಲ. ತಾವು ಹೇಳಿದತಕ್ಷಣ ದಿನಾಂಕ 11ನೇ ನವಂಬರ್ 1996ರಲ್ಲಿ ಕಿರಿಯ ಅಭಿಯಂತರರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ಅಲ್ಲಿ ಸ್ಥಳ ಪರೀಕ್ಷೆ ನಡೆಸಿ ವರದಿಗಳನ್ನು ಕೊಡುತ್ತಿದ್ದಾರೆ. ಸ್ಪೆಷಲ್ ಆಡಿಟ್ ಟೀಂ ಕಳುಹಿಸಿ ಕೊಟ್ಟು ತನಿಖೆ ನಡೆಸುತ್ತಿದೆ. ಏಪ್ರಿಲ್ ತಿಂಗಳೊಳಗಾಗಿ ಈಗಾಗಲೇ ತನಿಖೆ ಪ್ರಗತಿಯಲ್ಲಿದ್ದು, ಅದು ಮುಗಿದಕೂಡಲೇ ಏಪ್ರಿಲ್ 1997ರಲ್ಲಿ ವಿವರವಾದ ವರದಿಯನ್ನು ಸರ್ಕಾರಕ್ಕೆ ಕಳುಹಿಸಿಲಾಗುವುದು ಎಂದು ಕೂಡ ಹೇಳುತ್ತಿದ್ದೇನೆ. ಇದನ್ನು 1992-93ನೇ ಇಸವಿಯಲ್ಲಿ ಇದ್ದಾಗಲೂ ಕೂಡ ಗಮನಕ್ಕೆ ತರಲಿಲ್ಲ. ತಮ್ಮ ಗಮನಕ್ಕೆ ಬಾರದೇ ಅನೇಕ ವಿಷಯಗಳಾಗಿರಬಹುದು. ಇಲ್ಲವೆಂದು ಹೇಳಲಾರೆ. ತಾವು ಆ ಕಾಲದಲ್ಲಿ ಶಾಸಕರಾಗಿದ್ದಿರಿ. ತಾವು ನಮ್ಮನ್ನು ಅಭಿನಂದಿಸಬೇಕು. ಏಕೆಂದರೆ ಯಾವುದೇ ತರವಾದಂತಹ ಅಂಜಿಕೆಗೆ, ಒತ್ತಡಕ್ಕೆ ಒಳಗಾಗದೆ ತನಿಖೆಯನ್ನು ನಡೆಸಿದ್ದೇವೆ.

ಶ್ರೀ ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಆಗಿನ ಸರ್ಕಾರ ಇದ್ದಾಗ ಕೂಡ ಆಗಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ಒಂದು ಕಡೆ ಶಾಸಕರು ಮುಂದುವರೆದು ಹೇಳಿದ್ದಾರೆ ಎಲ್ಲಿ ಐದು ಪರ್ಸೆಂಟ್ ಕೆಲಸವಾಗಿಲ್ಲ ಅಲ್ಲಿ ದುಡ್ಡು ಖರ್ಚಾಗಿದೆ ಎಂದು, ಅದಕ್ಕೆ ನಿರ್ದಿಷ್ಟವಾದಂತಹ ಉತ್ತರ ಕೊಡಿ. ಈಗ 1982-83, 1983-84ನೇ ಇಸವಿಯಲ್ಲಿ ತಾವು ಏನು ಹೇಳುತ್ತಿದ್ದೀರಿ, ನೀವು ಮಂತ್ರಿಗಳಾಗಿದ್ದೀರಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ. ಅದನ್ನೇ ಹೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್: ತಾವು ಗಮನಿಸಬೇಕಾದದ್ದು ಏನೆಂದರೆ ನೀವು ವಿಚಾರಣೆ ಮಾಡುವುದಕ್ಕೆ ಏಕೆ ಅಂಜುತ್ತಿದ್ದೀರಿ, ಏಕೆ ವಿಚಾರಣೆ ಮಾಡುವುದಕ್ಕೆ ವಿಳಂಬ ಮಾಡುತ್ತಿದ್ದೀರಿ ಎಂದರೆ ಇದು 1992ನೇ ಇಸವಿಯಲ್ಲಿ ಆಗಿರತಕ್ಕಂಥಾದ್ದು ಆಗಿರುವುದರಿಂದ ಇದರ ಬಗ್ಗೆ ಸ್ಪೆಷಲ್ ಆಡಿಟ್ ನಡೆಯುತ್ತಿದೆನ್ನುವಂತಹ ಮಾತನ್ನು ಹೇಳಿದ್ದುದು. 1992ನೇ ಇಸವಿಯಲ್ಲಿ ಮಾಡಿದ್ದು ಬಿಡಬೇಕು ಅಥವಾ ಅವರ ಮೇಲೆ ಹೇಳಬೇಕು ಎನ್ನುವ ಉದ್ದೇಶ ಅಲ್ಲ. ನಾವು ಕೂಡಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಬೇಗನೆ ಆಗಲಿ ಎಂದು ಅವರ ಇಚ್ಛೆ ಏಕೆಂದರೆ ಪ್ರಧಾನ ಮಂತ್ರಿಗಳು ದಿನಾಂಕ31, 1,2,3 ಮತ್ತು4-5 ರಂದು ಒಟ್ಟು4-5 ದಿವಸ ಇಲ್ಲಿ ಟೂರ್‌ಮಾಡುವವರಿದ್ದಾರೆ. ಪ್ರತಿಯೊಂದು ಇಲಾಖೆಯನ್ನು ರಿವ್ಯೂ ಮಾಡುವವರಿದ್ದಾರೆ. ತಪ್ಪಿ ಅವರ ಕಣ್ಣು ನಿಮ್ಮ ಮೇಲೆ ಬಿದ್ದು ರಿವ್ಯೂ ಮಾಡಿದಾಗ ಈ ಒಂದು ಗುರಿಯನ್ನು ನೀವು ಸಾಧಿಸದೆ ಹೋದರೆ ನಿಮ್ಮ ಗತಿ ಏನು ಎನ್ನುವ ಚಿಂತೆ ಅವರಿಗೂ ಕೂಡ ಇದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಈ ತರಹ ಸ್ನೇಹ ಏನು ಇದೆ, ಈ ತರಹದ ಸ್ನೇಹಕ್ಕಿಂತ ನಮ್ಮನ್ನು ನಾವು ಕಾಪಾಡಿಕೊಳ್ಳಬಲ್ಲೆವು.

ಅಧ್ಯಕ್ಷರು : ಇಲ್ಲಿ ಎಲ್ಲಾ ಅಂತಹುದೇ ಹೆಚ್ಚು ಸ್ನೇಹ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಂತೂ ಸ್ವಲ್ಪ ಹೆದರಿಕೆ ಇದೆ ಎಂದಾಯಿತು. ಬರುವುದಂತೂ ಖಂಡಿತ, ರಿವ್ಯೂ ಮಾಡುವುದೂ ಖಂಡಿತ.